ಮಾಡಲ್ಪಟ್ಟಂತೆ ತಿಳಿಯತಕ್ಕದ್ದು, ಈ ಶೀಮೆಗೆ ಸರ್ವೆ ಮತ್ತು ಸೆಟಲ್‌ಮೆಂಟ್ ಜಾರಿಗೆ ತರಲ್ಪಟ್ಟ ಲಾಗಾಯತು ರೈತರುಗಳಿಗೆ ಅವರ ಜಮ್ಮಿಗಳಲ್ಲಿ ಬೆಳೆಯುವ ಮರಗಳ ವಿಷಯದಲ್ಲಿ ಹೇರಳವಾದ ರಿಯಾಯತಿಯು ಉಂಟುಮಾಡಲ್ಪಟ್ಟಿರುವದರಿಂದ, ಈ ರೂಲ್ಸ್ ಅನುಸಾರವಾದ ರಿಯಾಯತಿಯು ಮೌತಾದ್ ಆಗಿರತಕ್ಕದ್ದು.

ದನದ ಕೊಟ್ಟಿಗೆಗೋಸ್ಕರ ಜೇಕಾದ ಮನ್ನಾ ಜಾತಿ ಅಲ್ಲದ ಮರ ಮತ್ತು ಜೊಂಬುಗಳಿಗಾಗಿ ಅಮಲ್‌ದಾರರಿಗೆ ಕೊಡುವ ದರಖಾಸ್ತಿನ ನಮೂನೆ:—

೧ ರೈತನ ಹೆಸರು, ಹೋಬ್ಳಿ ಗ್ರಾಮದ ಹೆಸರು.	ಅವನು ತೆರುವ ಕಂದಾಯದ ಜೊಬಲಗು.	ಅವನಲ್ಲಿರುವ ದನಗಳ ಸಂಖ್ಯೆ.	ಮರ ಮತ್ತು ಜೊಂಬುಗಳು ಅಪೇಕ್ಷಿತ ವರ್ಷಗಳಿಗೆ ಯಾವಾಗ ಕೊಡಲ್ಪಟ್ಟಿತ್ತು.	ಹೀಗೆ ಆವಶ್ಯಕವಾಗಿರುವ ೨ ಮತ್ತು ಜೊಂಬುಗಳ ಶೇಷ.	ಕಾರ್ಯ.	ಅಮಲ್‌ದಾರರ ಸಿಫಾರಸು.

ಮನ್ನಾ ಜಾತಿ ಅಲ್ಲದ ಮರ ಮತ್ತು ಜೊಂಬುಗಳಿಗೋಸ್ಕರ ರೈತರಿಗೆ ಕೊಡಲ್ಪಡುವ ಮಾಫಿ ರಹದಾರಿ ನಮೂನೆ:—

ತಾಲ್ಲೂಕು.	ರಹದಾರಿ ಪಡೆದವನ ಹೆಸರು, ಹೋಬ್ಳಿ ಮತ್ತು ಗ್ರಾಮ.	ಕಂದಾಯಸಲ್ಲತಕ್ಕಂಥ ೨ ದಗಳ ವಿವರ.	ಯಾವ ಕೆಲಸದ ಒಸ್ಕೆ ಕೊಡಲ್ಪಟ್ಟಿತು.	ಭಂಡಿ ಜೋಡಿ ಪ್ರಕಾರ ತೋಡು.	ಸದರೀ ಸೂದೂನು ಕತರಾಯಿಸಿ ಸಲ್ಲಬೇಕಾದ ಪ್ರದೇಶ.	ರಹದಾರಿಯು ನಾಪಸು ನಷ್ಟಡ ಲ್ಪತಕ್ಕಂಥ ತಾರೀಖು.	ಅದು ನಾಪಸ ನೆಡಲ್ಪಟ್ಟ ತಾರೀಖು.

ಮೊಕ್ಕಾಂ,
ತಾರೀಖು

ಡೆಪ್ಯೂಟಿ ಕಮ್ಮಿಷನರ್ ಯಾ
ಫಾರೆಸ್ಟ್ ಆಫೀಸರ್.

ತಾರೀಖು 10ನೇ ಫಿಬ್ರವರೀ 1887.

ನಂ. 245.—1886ನೇ ಇಸವಿ ಡಿಸಂಬರ್ 22ನೇ ಮಕ್ಕಂ 1461ನೇ ನಂಬರ್ ಇಸ್ತಿಹಾರ್‌ನಾಮೆಯ 2ನೇ ಪ್ಯಾರಾ ಅನುಸರಿಸಿ ಮೈಸೂರು ಶೀಮೆಯಲ್ಲಿ ಜಮ್ಮಿ ಪಡೆಯುವದಕ್ಕೆ ಗವರ್ನಮೆಂಟಿನ ಮಂಜೂರಾತಿಗೋಸ್ಕರ ದರಖಾಸ್ತು ಕಳುಹಿಸುವ ಆಫೀಸರುಗಳು, ಅವರ ದರಖಾಸ್ತಿನೊಂದಿಗೆ ಇದರಡೀ ಕಂಡ ತಪಶೀಲ್‌ಗಳು ಅಡಗಿರುವ ಒಂದು ತಖ್ತೆಯನ್ನು ಕಳುಹಿಸತಕ್ಕದ್ದು.

1. ದರಖಾಸ್ತು ಮಾಡುವ ಆಫೀಸರರ ಹೆಸರು ಮತ್ತು ಉದ್ಯೋಗದ ಹೆಸರು.
2. ಪಡೆಯುವದಕ್ಕೆ ಉದ್ದೇಶಿಸಲ್ಪಟ್ಟ ಜಮ್ಮಿ ಇರತಕ್ಕ ತಾಲ್ಲೂಕು ಮತ್ತು ಗ್ರಾಮದ ಹೆಸರು.
3. ತರೀಯೇ ಖುಷ್ಕಿಯೇ ಅಥವಾ ಬಾಗಾಯತೇ.
4. ಸರ್ಕಾರ್ ಅಥವಾ ಇನಾಮೆ.
5. ಬೀಜವರಿ, ವ ಕಂದಾಯವೇನಾದರೂ ಇದ್ದರೆ ಅದು.
6. ಖರೀದಿ ಮೂಲಕವೇ ಆಧಾರದ ಮೂಲಕವೇ ದಾನ ವಗೈರೆ ಮೂಲಕವಾಗಿಯೇ ಯೆಂಬ ತಪಶೀಲು.
7. ಪ್ರತಿಫಲವೇನಾದರೂ ಇದ್ದರೆ ಅದು.

ನಂ. 247 ತಾರೀಖು 11ನೇ ಫಿಬ್ರವರೀ 1887.

ತಾಲ್ಲೂಕು.	ನಾಗಣಿ.	ನಂಬರು.	ಕಾಯಂ ಇಡಲ್ಪಡಬೇಕಾದ ಗ್ರಾಮಗಳು.	ನಂಬರು.	ನಾಲ್ಕನೆ ಕಲಂನಲ್ಲಿ ಕಂಡ ಗ್ರಾಮಗಳೊಂದಿಗೆ ಸೇರಿಸಲ್ಪಡಬೇಕಾದ ಗ್ರಾಮಗಳು.	ಷರಾ.
1	2	3	4	5	6	7
ಚಿಕ್ಕನಾಯಕನಹಳ್ಳಿ	ಬಸ್ತೆಟ್ಟಿಹಳ್ಳಿ	1	ಬಸ್ತೆಟ್ಟಿಹಳ್ಳಿ	1	ಕುಪನಹಳ್ಳಿ	
		2	ಗವುಡನಹಳ್ಳಿ	1	ಬಿಡಗೆದಿನ್ನೆ	ಬೇಜಿರಾಖ್
		3	ದೊಡ್ಡಗುಮ್ಮನಹಳ್ಳಿ	1	ತಂಬಲಹಳ್ಳಿ	
				2	ಚೆನದನಾಯಕನಹಳ್ಳಿ	ಡಿಟೋ
		4	ಮದ್ದೇನಹಳ್ಳಿ	1	ಬೊತೇನಹಳ್ಳಿ	ಡಿಟೋ
				2	ಕೃಷ್ಣರಾಜಪುರ	
		5	ಚಿಲ್ಬೊಮ್ಮನಹಳ್ಳಿ	1	ಚಂದಗಾನಹಳ್ಳಿ	ಡಿಟೋ
		6	ರಾಮೇಶ್ವರ	1	ಗೇರಮರದನಹಳ್ಳಿ	ಡಿಟೋ
		7	ತಾವರೆವಜು		ಅಮಗರಹಳ್ಳಿಯ ವಡದಭಾಗ	
		8	ನಲರಾಲಹಳ್ಳಿ	1	ಜವತಿಗಲ್ಹಳ್ಳಿ	
					ರಾಮೇಶ್ವರದ ವಡದಭಾಗ	
		9	ತಂಬಲಹಳ್ಳಿ	1	ಯರವಾಬೇನಹಳ್ಳಿ	ಡಿಟೋ
					ಬಸ್ತೆಟ್ಟಿಹಳ್ಳಿಯ ವಡದಭಾಗ	
		10	ಮಾವ್ಬೆಹಳ್ಳಿ	1	ಕಾಚಕೇಹಳ್ಳಿ ಮತ್ತು ಕಾಚಕೇಹಳ್ಳಿ ಮಾರೇಹಳ್ಳಿ. ಮಧ್ಯ ಇರತಕ್ಕ ಬಸ್ತೆಟ್ಟಿಹಳ್ಳಿಯ ಕೆರೆದೇಖೀಲ್ ಸದರೀ ಗ್ರಾಮದ ವಡದಭಾಗ	ಡಿಟೋ
		11	ಬನಬೆಮ್ಮನಕೆರಿ		ದೊಡ್ಡತೀಕಹಳ್ಳಿ ಮಜರೆ ಬಂಡೆಮ್ಮನಕೆರಿ	
				1	ಯೇನಿಗುಂಡ್ಲಹಳ್ಳಿ	
		12	ಕಾಚನಾಯಕನಹಳ್ಳಿ	1	ಅವಲಕೊಂಡರಾಯನಹಳ್ಳಿ	ಡಿಟೋ
		13	ಚಿಕ್ಕತೀಕಹಳ್ಳಿ	1	ವೆಂಕಟಮ್ಮನಹಳ್ಳಿ	ಡಿಟೋ
				2	ಪರಿಗಿಚಿನ್ನೇಹಳ್ಳಿ	ಡಿಟೋ
				3	ಚಿಂತಲಹಳ್ಳಿ	
		14	ಗೊರ್ಜಲಹಳ್ಳಿ	1	ಕೊಂಡಗರಿಹಳ್ಳಿ	
				2	ತಿರುಮಲಯ್ಯನದಿನ್ನೆ	
		15	ಅಜಕದಾರೀನಹಳ್ಳಿ	1	ಕೃಷ್ಣಮ್ಮನಹಳ್ಳಿ	ಡಿಟೋ
				2	ಚಿಕ್ಕನಾಗೇನಹಳ್ಳಿ	
		16	ಮುದ್ದಂಣನದಿಣ್ಣೆ	1	ಮಾವರಹಳ್ಳಿ	
				2	ಪಾಚರೆವೋಕಲಹಳ್ಳಿ	
		17	ಕುರುಬರಹಳ್ಳಿ	1	ವೀರದಿಮ್ಮನಹಳ್ಳಿ	ಡಿಟೋ
		18	ವದ್ದನಹಳ್ಳಿ	1	ಕುರಿಬಾಚನಹಳ್ಳಿ	ಡಿಟೋ
		19	ಪಂಡಹಳ್ಳಿ	1	ಉಡಮಾಚನಹಳ್ಳಿ	
		20	ವಡ್ಡರಹಳ್ಳಿ		ಬಾಚನಹಳ್ಳಿ ವಡದಭಾಗ	
		21	ಮುಚ್ಚಿತಳದಿಣ್ಣೆ	1	ಕರಡಗುರ್ತಿ	ಡಿಟೋ
				2	ಸಿಂಗದ್ಯಾರಹಳ್ಳಿ	ಡಿಟೋ

ತಾಲ್ಲೂಕು.	ನಾಗಣಿ.	ನಂಬರು.	ಕಾಯಂ ಇಡಲ್ಪಡಬೇಕಾದ ಗ್ರಾಮಗಳು.	ನಂಬರು.	ನಾಲ್ಕನೇ ಕಲಂನಲ್ಲಿ ಕಂಡ ಗ್ರಾಮಗಳೊಂದಿಗೆ ಕೀಲಿಸಲ್ಪಡಬೇಕಾದ ಗ್ರಾಮಗಳು.	ಷರಾ.
1	2	3	4	5	6	7
ಚಿಕ್ಕನಾಯಕನಹಳ್ಳಿ.	ಗಂಜಿಗುಂಟೆ. ಬಸ್ತೀಪಟ್ಟಹಳ್ಳಿ.	22	ಹಿರಿಯಲ್ಚಕ್ಕನಹಳ್ಳಿ ..	1	ಚಿಕ್ಕಯಲಚೇನಹಳ್ಳಿ ..	
				2	ಯಲಗಲ್‌ಹಳ್ಳಿ ..	
		23	ಯರಪನಹಳ್ಳಿ ..	1	ಅವಲರೆಡ್ಡಿಹಳ್ಳಿ ..	
		24	ಜೊಕ್ಕನಹಳ್ಳಿ ..	1	ಬೈರಪ್ಪಗವುಡನಹಳ್ಳಿ ..	ಬೇಚಿರಾಖ'
		25	ಗಂಗನಹಳ್ಳಿ ..	1	ಅಡ್ಡಿಬ್ರಾಹ್ಮರಹಳ್ಳಿ ..	ಡಿಟೋ
		26	ಗೋಣಿಮರದಹಳ್ಳಿ ..	1	ಪೋಲಹಳ್ಳಿ ..	
				2	ಹೊಸೂರು ..	ಡಿಟೋ
		27	ಗೊಣ್ಣೀಪಲ್ಲಿ ..	1	ಆನಪಲ್ಲಿ ..	
				2	ರಾಚಪಲ್ಲಿ ..	
		28	ನಂದನಹೊಸಹಳ್ಳಿ ..	1	ನಾಲ್‌ದಾಸೇನಹಳ್ಳಿ ..	
				2	ದೊಡ್ಡಗುಟ್ಟಹಳ್ಳಿ ..	
		29	ಕಂಚರಲಹಳ್ಳಿ ..	1	ನೊಕ್ಕಲಹಳ್ಳಿ ..	ಡಿಟೋ
				2	ಜರೆನಾಯಕಹಳ್ಳಿ ..	ಡಿಟೋ
		30	ಗೌಡನಹಳ್ಳಿ ..	1	ತಲಗದಚಿಂತಿ ..	ಡಿಟೋ
		31	ಕುಂದಲ್‌ಗುರ್ಕಿ ..	1	ಕುಂಬಾರಹಳ್ಳಿ ..	ಡಿಟೋ
				2	ಬೊಮ್ಮನಹಳ್ಳಿ ..	ಡಿಟೋ
		32	ಗೊಲ್ಲಹಳ್ಳಿ ..	1	ನಕ್ಕಲ್‌ಹಳ್ಳಿ ..	ಡಿಟೋ
				2	ನಡುವಿನಹಳ್ಳಿ ..	ಡಿಟೋ
		33	ದಾಸೇನಹಳ್ಳಿ ಅಮಾನೀಕೆರೆ ..		ಕುಂದಲಗುರ್ಕಿ ಗ್ರಾಮದ ವಡದಭಾಗ ..	
		34	ಗಂಗಾಪುರ ..	1	ವದನಕುಂಟೆ ..	
		35	ಹೊಸಪೇಟೆ ..	1	ಭದ್ರನ ಅಮಾನೀಕೆರೆ ..	
		36	ತಿಮ್ಮಸಂದ್ರ ..	1	ಸುಗತೂರ್ ಬೂಗನಹಳ್ಳಿ ..	ಡಿಟೋ
		37	ಬಸವಾಪಟ್ಣ ..	1	ಐಯ್ಯಪ್ಪನಹಳ್ಳಿ ..	ಡಿಟೋ
		38	ಯಣಂಗೂರು ..	1	ಮಲ್ಲೇಶಪುರ ..	ಡಿಟೋ
		39	ತಡೂರು ..	1	ಬರ್ಲಪಡಿ ..	ಡಿಟೋ
		40	ಕಸಬಾ ವಡಿಗೇನಹಳ್ಳಿ ..	1	ಹುಣಸೆಪಡಿಯ ..	ಡಿಟೋ
		41	ಕೊಂಡೇನಹಳ್ಳಿ ..		ದಂಡಿಗನಹಳ್ಳಿ ಗ್ರಾಮದ ವಡದಭಾಗ ..	
		42	ಚಿಕ್ಕತಡಮಂಗಲ ..	1	ದ್ಯಾನಪಡಿಯ ..	ಡಿಟೋ
	ನಿಡಗೇನಹಳ್ಳಿ. ಜಂಗಂಕೋಟೆ.	43	ನಲ್ಲಪ್ಪನಹಳ್ಳಿ ..	1	ಪಡವಲ ನಿಲರತಿಹಳ್ಳಿ ..	
				2	ಲಿಂಸೇನಹಳ್ಳಿ ..	
		44	ನನಗನಹಳ್ಳಿ ..	1	ಮಾರ್ವೆಹಳ್ಳಿ ..	ಡಿಟೋ
		45	ಕೋಟಗಲ್ಲು ..	1	ಉಚಲಹಳ್ಳಿ ..	ಡಿಟೋ
				2	ಪೊಲಗುರುವನಹಳ್ಳಿ ..	
		46	ಕಾಮನಹಳ್ಳಿ ..	1	ಬಂಡರ್ಲಹಳ್ಳಿ ..	
		47	ಯಿರಗಪ್ಪನಹಳ್ಳಿ ..	1	ಗೊಲ್ಲಾರಹಳ್ಳಿ ..	ಡಿಟೋ
				2	ನಾಯಿನವಾರಹಳ್ಳಿ ..	ಡಿಟೋ

ತಾಲ್ಲೂಕು.	ಮಾಗಣಿ.	ನಂಬರು.	ಕಾಯಂ ಇಡಲ್ಪಡಬೇಕಾದ ಗ್ರಾಮಗಳು.	ನಂಬರು.	ನಾಲ್ಕನೇ ಕಲಂನಲ್ಲಿ ಕಂಡ ಗ್ರಾಮಗಳೊಂದಿಗೆ ಕೇರಿಸ್ಪಡಬೇಕಾದ ಗ್ರಾಮಗಳು.	ಪರಾ.
1	2	3	4	5	6	7
		48	ಗೋಡಿ ಮಂಚೇನಹಳ್ಳಿ ..	1	ವರದಗನಹಳ್ಳಿ ..	
				2	ಚಿಕ್ಕೆನಹಳ್ಳಿ ..	
		49	ಗೊಲ್ಲಹಳ್ಳಿ ..	1	ಬಗವನಹಳ್ಳಿ ..	
		50	ನೇರ್ಲೆಪುರದಹಳ್ಳಿ ..	1	ಪಗಗಾನಡೊಡ್ಡಿ ..	
				2	ಮುಳ್ಳುಕುರುಬರಹಳ್ಳಿ ..	ಜೇಚಿರಾಖ
				3	ಕೃಷ್ಣಾಪುರ ..	ಡಿಟೋ
				4	ಮುಳ್ಳುಸ್ವರದಿಹಳ್ಳಿ ..	ಡಿಟೋ
	ನಾದಲ್ಲಿ.	51	ಕುರುಬತಹಳ್ಳಿ ..	1	ಪಟನಾತ್ಕನಹಳ್ಳಿ ..	ಡಿಟೋ
		52	ಯರ್ರನಾಗೇನಹಳ್ಳಿ ..	1	ಮಂಚಿಗನಹಳ್ಳಿ ..	ಡಿಟೋ
		53	ಕರಿಯಪ್ಪನಹಳ್ಳಿ ..	1	ಬೈರದಿನ್ನೆ ..	ಡಿಟೋ
				2	ಗೊಲ್ಲರಹಳ್ಳಿ .	ಡಿಟೋ
				3	ಅರಳೀಮರದ ದಿನ್ನೆ ..	ಡಿಟೋ
		54	ಮಲ್ಲಿಕೆಟ್ಟಹಳ್ಳಿ ..	1	ಅಬ್ಬಕಾರಹಳ್ಳಿ ..	ಡಿಟೋ
		55	ಗಡ್ಲವಾರಹಳ್ಳಿ ..	1	ಪಂಡಲ್ಸಹಳ್ಳಿ ..	ಡಿಟೋ
		56	ತುಮ್ಮೇನಹಳ್ಳಿ ..	1	ಕಂಬದಹಳ್ಳಿ ..	ಡಿಟೋ
				2	ಬಗ್ಗಿಮರದಹಳ್ಳಿ ..	ಡಿಟೋ
		57	ನಾಕಲಹಳ್ಳಿ ..	1	ಮಾರ್ವೆಹಳ್ಳಿ ..	ಡಿಟೋ
		58	ತಲಕಾಯಲ್‌ಬೆಟ್ಟ ..	1	ಕೋಪ್ಪಹಳ್ಳಿ ..	ಡಿಟೋ
ಪಿಜ್ಞಳ್ಳು.				2	ಕೃಷ್ಣಾಪುರ ..	ಡಿಟೋ
				3	ಜಂಗಮಾರಹಳ್ಳಿ ..	ಡಿಟೋ
		59	ಬಂಡಹಳ್ಳಿ ..	1.	ಹೊಸಹಳ್ಳಿ ..	ಡಿಟೋ
				2	ಉಲಕೇತನಹಳ್ಳಿ ..	ಡಿಟೋ
				3	ತಿಲಹಳ್ಳಿ ..	ಡಿಟೋ
		60	ಪಂಡಿಗನಾಳು ..	1	ಸಿಲ್ಲವಾನಹಳ್ಳಿ ..	ಡಿಟೋ
	ಪಿಜ್ಞಳ್ಳು.	61	ಕುಂದಂಡಹಳ್ಳಿ ..	1	ನಾಮಲಹಳ್ಳಿ ..	ಡಿಟೋ
		62	ಕೆಂಪನಹಳ್ಳಿ ..	1	ತಿರುಮಲ್ಲನದಿನ್ನೆ ..	ಡಿಟೋ
		63	ಗುಡಿಹಳ್ಳಿ ..	1	ನರಸಿಮ್ಮನಹಳ್ಳಿ ..	ಡಿಟೋ
		64	ತಿಗ್ನಿ ..	1	ತಿಗನಿಕಾನೆ ..	ಡಿಟೋ
		65	ಪಳ್ಳಿಚೆರ್ಲು ..	1	ದಂಡಿಗನಹಳ್ಳಿ ..	ಡಿಟೋ
		66	ದೊಡ್ಡ ಮೂಮನಹಳ್ಳಿ ..	1	ಚಿಕ್ಕ ಮೂಮನಹಳ್ಳಿ ..	ಡಿಟೋ
				2	ಉಗ್ರಲಹಳ್ಳಿ ..	ಡಿಟೋ
				3	ಗೊಡವಾರದಹಳ್ಳಿ .	ಡಿಟೋ
				4	ಬಾಲರೆಡ್ಡಿಹಳ್ಳಿ ..	ಡಿಟೋ
	ಹೊನ್ನಾರ.	67	ಪೆರಮಾಚೇನಹಳ್ಳಿ ..	1	ವೆಂಕಟೇಶಪುರ ..	
		68	ಕಾಡಹಳ್ಳಿ ..	1	ಗುರವನತ ..	
		69	ಕಾಲಹಳ್ಳಿ ..	1	ಆದಪ್ಪನಹಳ್ಳಿ ..	

ತಾಲ್ಲೂಕು.	ಮಾಗಣಿ	ನಂಬರು.	ಕಾಯಂ ಇಡಲ್ಪಡಬೇಕಾದ ಗ್ರಾಮಗಳು.	ನಂಬರು.	ನಾಲ್ಕನೇ ಕಲಂನಲ್ಲಿ ಕಂಡ ಗ್ರಾಮಗಳೊಂದಿಗೆ ಶೇರಿಸಲ್ಪಡಬೇಕಾದ ಗ್ರಾಮಗಳು.	ಪರಾ.
1	2	3	4	5	6	7
ಚಿಕ್ಕನಾಯಕನಹಳ್ಳಿ.	ಚಿಕ್ಕನಾಯಕನಹಳ್ಳಿ.	70	ಪಾಳ್ಯ ..	1	ಚಿಕ್ಕಪಾಳ್ಯ ..	
		71	ಕನಮಂಗಲ ..	1	ನಾಗೇನಹಳ್ಳಿ ..	ಬೇಚಿರಾಖ್
		72	ಚಿಂತಾದಪಿ ..	1	ನಲ್ಲೇನಹಳ್ಳಿ ..	ಡಿಟೋ
		73	ಮಾರಪಲ್ಲಿ ..	1	ಕೊತ್ತೂರು ..	ಡಿಟೋ
		74	ಬೋಡಗೂರು ..	1	ಗಿಡ್ಡೇನಹಳ್ಳಿ ..	ಡಿಟೋ
		75	ಮಾಸ್ತೇನಳ್ಳಿ ..	1	ದಾಲ್‌ಕುಂಟೆ ..	ಡಿಟೋ
		76	ಜಂಗಂಪುರ ..	1	ಕರಡಿಗುಟ್ಟೆ ..	
	ಬೆಲ್ಲಾಳನೇಸ್ಯೆ.	77	ಅನಪಲ್ಲಿ ..	1	ವಂದರವೀರಯ್ಯನ ದಿನ್ನೆ ..	ಡಿಟೋ
		78	ಬುರಡಗುಂಟೆ	1	ಬುಟ್ಟೆಗಾರಹಳ್ಳಿ ..	ಡಿಟೋ
				2	ಬುರಡಿಹಳ್ಳಿ ..	ಡಿಟೋ
		79	ಮೋಟಮಾಕಲಹಳ್ಳಿ ..	1	ಕಾಚೆನಹಳ್ಳಿ ..	
		80	ಕಂಬೇನಹಳ್ಳಿ ..	1	ಬೋಡಿರೆಡ್ಡಿಹಳ್ಳಿ ..	ಡಿಟೋ
				2	ಚಕ್ಕಂಪಲ್ಲಿ ..	ಡಿಟೋ
		81	ತುಲವನ್ನೂರು ..	1	ರಾಮಯ್ಯನಹಳ್ಳಿ ..	ಡಿಟೋ
		82	ಅಮಾನೀ ತಿಮ್ಮಸಾನಿಕೆರೆ ..	1	ಸಿಂಗರಾಜದಿನ್ನೆ ..	
		83	ದೇವಗನಹಳ್ಳಿ ..	1	ಬೂಚಿವಾಗನಹಳ್ಳಿ ..	ಡಿಟೋ
		84	ಮನಿಯಾರ್ ಮುದ್ದನಹಳ್ಳಿ ..	1	ಅಕ್ಕಸನಹಳ್ಳಿ ..	
		85	ಗೊಲ್ಲಹಳ್ಳಿ ..	1	ಪೆಸ್ತೆರಹಳ್ಳಿ ..	
				2	ನೇರದಗುಟ್ಟಹಳ್ಳಿ ..	
		86	ಕುಟ್ಟಪ್ಪನಹಳ್ಳಿ ..	1	ಜಂಗಲಹಳ್ಳಿ ..	
				2	ತಲಕಸಂದ್ರ ..	ಡಿಟೋ
		87	ಕದರೇನಹಳ್ಳಿ ..	1	ನ್ಲೆಸಂದ್ರ ..	ಡಿಟೋ
ತಿಪಟೂರು.	ತಿಪಟೂರು.	1	ಅತ್ತಿಕುಪ್ಪಾ ..	1	ಮಂರ್ಜಹಳ್ಳಿ ..	ಡಿಟೋ
				2	ಮಾರಹಳ್ಳಿ ..	ಡಿಟೋ
		2	ತೇಗನಹಳ್ಳಿ ..	1	ಮಾವಿನಕೆರೆ ..	ಡಿಟೋ
		3	ಬಿಲ್‌ರಾಮನಹಳ್ಳಿ ..	1	ತಲಗನಹಳ್ಳಿ ..	ಡಿಟೋ
		4	ಮನಗನಹಳ್ಳಿ ..	1	ಮಾದಿಹಳ್ಳಿ ..	ಡಿಟೋ
		5	ಹರಲಹಳ್ಳಿ ..	1	ಕಡೆವಪುರ ..	
				2	ನಿಲಿಮಂಗಲ ..	
		6	ಚಾಮಲಪುರ ..	1	ತೇಗನಹಳ್ಳಿ ..	ಡಿಟೋ
		7	ಮೈಲನಹಳ್ಳಿ ..	1	ಕೆಟ್ಟಪುರ ..	
					4ನೇ ಕಲಂನಲ್ಲಿ 7ನೇ ನಂಬರಿಗೆ ದಾಖಲಾದ ಮೈಲನಹಳ್ಳಿಯ ಪಶ್ಚಿಮಭಾಗ ..	
		8	ಮಾದಿಗರ ಹೊಸಹಳ್ಳಿ ..	1	ಸೀತಾಪುರ ..	ಡಿಟೋ
					4ನೇ ಕಲಂನಲ್ಲಿ 7ನೇ ನಂಬರಿಗೆ ದಾಖಲಾದ ಪೂರ್ವಭಾಗ ..	

ತಾಲ್ಲೂಕು.	ನಾಗಣಿ.	ನಂಬರು.	ಕಾಯಂ ಇಡಲ್ಪಡಬೇಕಾದ ಗ್ರಾಮಗಳು.	ನಂಬರು.	ನಾಲ್ಕನೇ ಕಲಂನಲ್ಲಿ ಕಂಡ ಗ್ರಾಮಗಳೊಂದಿಗೆ ಬೆರಸಲ್ಪಡಬೇಕಾದ ಗ್ರಾಮಗಳು.	ಷರಾ.
1	2	3	4	5	6	7
ಅಚ್ಚಿ ಹುಬ್ಬಳ್ಳಿ.	ಅಚ್ಚಿ ಹುಬ್ಬಳ್ಳಿ.	9	ಹೆಮ್ಮಡಿಹಳ್ಳಿ ..	1	ಚಿಟ್ಟುಸಹಳ್ಳಿ ..	ಬೇಚಿರಾಖ'
		10	ಹೊಲಿಯೂರು ..	1	ಹೆಮ್ಮಡಿಹಳ್ಳಿ ..	
		11	ವಡ್ಡರಗುಡಿ ..	1	ಹಂಗ್ರಹಳ್ಳಿ ..	ಡಿಟೋ
		12	ಮೂಡ್ಲಾಪುರ ..	1	ದೇವರಹಳ್ಳಿ ..	
		13	ದೊಡ್ಡಕ್ಕಾಹಳ್ಳಿ ..	1	ಹೊಸಗದ್ದೆ ..	ಡಿಟೊ
		14	ಹೊಸಗದ್ದೆ ..	1	ಕೊಪ್ಪಲು ..	ಡಿಟೋ
		15	ಬಿಲಗ್ನನಹಳ್ಳಿ ..	1	ಪವಪುರ ..	ಡಿಟೋ
				2	ಹೊಸಪಟ್ಣ ..	ಡಿಟೋ
	ಅಚ್ಚಿ ಹುಬ್ಬಳ್ಳಿ.	16	ಕೂಡ್ಲಕುಪ್ಪೆ ..	1	ಬುಡುಡೇನಹಳ್ಳಿ ..	ಡಿಟೋ
				2	ಹಂಗರಹಳ್ಳಿ ..	ಡಿಟೋ
				3	ಮನೇಸಾಲೆ ..	ಡಿಟೋ
		17	ಗದ್ದೆಹೊಸೂರು ..	1	ಅನವಾಸಪುರ ..	ಡಿಟೋ
				2	ಹಂಗರಹೊಸೂರು ..	ಡಿಟೋ
				3	ಗುಂಡಾಪಟ್ಣ ..	
		18	ಹೊನ್ನೇನಹಳ್ಳಿ ..	1	ಮಾದಿಹಳ್ಳಿ ..	
		19	ಚಿಕ್ಕಮಂದಗೇರಿ ..	1	ಬೇವಿನಹಳ್ಳಿ, ಅಮಾನೀಕೆರೆ ..	
				2	ದಾಸರಹಳ್ಳಿ ..	
		20	ಮುದ್ದನಹಳ್ಳಿ ..	1	ಚೌಡ್ಲಾಪುರ ..	
					ನಾಲೆನೀರು ಹಾಯುವಹೊನ್ನೇನಹಳ್ಳಿ ಅಳ್ಳೇನಹಳ್ಳಿ ಮತ್ತು ಮುದ್ದನಹಳ್ಳಿ ನಾಲೆಗೆ ದಕ್ಷಿಣದಿಕ್ಕಿನಲ್ಲಿರುವ ನಂ. 1ರ ಲಾಗಾಯಿತು 49ರ ವರಗಿನ ಸರ್ವೆ ನಂ.	
		21	ನಂದೀಪುರ ..	1	ದಳವಾಯಿ ತೋಟ ಮತ್ತು ನಂದೀಪುರದ ವಡದಭಾಗ ..	
		22	ಮಲ್ಲೇನಹಳ್ಳಿ ..		ನಂ. 1ರ ಲಾಗಾಯಿತು 49ರ ವರಿಗಿನ ಸರ್ವೆ ನಂಬರ್ ವಿನಾ, ಹೊನ್ನೇನಹಳ್ಳಿ ಅಳ್ಳೇನಹಳ್ಳಿ ಮತ್ತು ಮುದ್ದನಹಳ್ಳಿ ನಾಲೆ ಇವುಗಳ ಉಳಿದ ವಿಶ್ವಭಾಗ ..	
		23	ನಾತನಹಳ್ಳಿ ..	1	ಸಿದ್ದೇನಹಳ್ಳಿ ..	
	ಹಿಕ್ಕಿ ಹೊ.	24	ಸೊಳ್ಳೇಪುರ ..	1	ವ್ಯಾವಗನಹಳ್ಳಿ ..	ಡಿಟೋ
		25	ಕೋಡಿವೂರನಹಳ್ಳಿ ..	1	ಲಂಡಿಕುರ ..	ಡಿಟೋ
				2	ಪಳೇಕಿಕ್ಕೇರಿ ..	ಡಿಟೋ
		26	ವಡ್ಡರಹಳ್ಳಿ ..	1	ವಡ್ಡರಕೊಪ್ಲು ..	ಡಿಟೋ
		27	ಮಣಿಕನಹಳ್ಳಿ ..	1	ಹರಗನಹಳ್ಳಿ ..	ಡಿಟೋ

ತಾಲ್ಲೂಕು.	ಪಟ್ಟಣ.	ನಂಬರು.	ಕಾಯಂ ಇಡಲ್ಪಡಬೇಕಾದ ಗ್ರಾಮಗಳು.	ನಂಬರು.	ನಾಲ್ಕನೇ ಕಲಂನಲ್ಲಿ ಕಂಡ ಗ್ರಾಮಗಳೊಂದಿಗೆ ಕೇರಿಸಲ್ಪಡಬೇಕಾದ ಗ್ರಾಮಗಳು.	ಷರಾ.
1	2	3	4	5	6	7
ಹುಣಸೂರು	ಕಿಕ್ಕೇರಿ.	28	ದಾರೇನಹಳ್ಳಿ ..	1	ಕಿದ್ದಾಪುರ ..	
		29	ಕಿಕ್ಕೇರಿ ಅಮ್ಮನೀಕೆರೆ ..	1	ಚೌಡೇನಹಳ್ಳಿ ಅಣೆ ..	
		30	ಲಕ್ಷ್ಮೀಪುರ ..	1	ಮೂದಾಪಟ್ಟಣ ..	ಜೇಚಿರಾಖ'
	ಸಂತೆಬಾಚಹಳ್ಳಿ.	31	ನಾರಾಯಣಪುರ ..	1	ಬಿಳಿಕೆರೆ ..	ಡಿಟೋ
		32	ಕಿಂಗಾಪುರ ..	1	ಕಾಮಾದಿಹಳ್ಳಿ ..	ಡಿಟೋ
		33	ಹೊಡವನಹಳ್ಳಿ ..	1	ಕಾಂತೇನಹಳ್ಳಿ ..	ಡಿಟೋ
		34	ಸೋಮೇನಹಳ್ಳಿ ..	1	ಕೊತ್ತಮೂರನಹಳ್ಳಿ ..	
		35	ಸಿಂಗಗಟ್ಟ ..	1	ನಂದೀಪುರ ..	ಡಿಟೋ
		36	ಅಂಕನಾಥಪುರ ..	1	ಕುಂಟೂಪುರ ..	ಡಿಟೋ
				2	ತಿರುಮಲಪುರ ..	ಡೀಟೊ
		37	ಕೋಡಿಹಳ್ಳಿ ..	1	ಜಾಲಿಕೊಪ್ಪಲ ..	ಡಿಟೋ
		38	ದುಗ್ಗನಹಳ್ಳಿ ..	1	ಕಿಂಗನಹಳ್ಳಿ ..	
		39	ಕುಂದೂರು ..	1	ಬೆಟ್ಟದಹಳ್ಳಿ ..	
				2	ಕ್ಯಾತನಹಳ್ಳಿ ..	
				3	ಬ್ಯಾಡರಹಳ್ಳಿ ..	
		40	ಅಕ್ಕೇಜೊಕ್ಕನಹಳ್ಳಿ ..	1	ಕಿಕ್ಕೇರಿಮಾಗಣಿ ಅಮ್ಮಾಸಿಕೊಪ್ಪಲು ..	
	ಜಿನಕಾಪುರ.	41	ಹೊಸಹಳ್ಳಿ ..	1	ಗಿಡ್ಡೀಕೊಪ್ಪಲ ..	ಡಿಟೋ
				2	ಸಂಜೀವಪುರ ..	ಡಿಟೋ
		42	ಹುಲಿಗೆರೆ ..	1	ಖಾಂಡ್ಯ ..	ಡಿಟೋ
		43	ಹುಣಸನಹಳ್ಳಿ ..	1	ಆಂದ್ರಪುರ ..	
		44	ಮೂದರಹಳ್ಳಿ ..	1	ಮುಂಚನಹಳ್ಳಿ ..	
		45	ಹೊಸೂರು ..	1	ಹೊನ್ನೇನಹಳ್ಳಿ ..	ಡಿಟೋ
		46	ಹೇರಗನಹಳ್ಳಿ ..	1	ಬೈರಾಪುರ ..	
	ಕನ್ನಂಬಾಡಿ.	47	ಗಿರಿಯಯ್ಯನಹಳ್ಳಿ ..	1	ದೇವಸ್ಥಾನ ಐಯ್ಯರಹಳ್ಳಿ ..	ಡಿಟೋ
		48	ಚಿಕ್ಕ ಐಯ್ಯರಹಳ್ಳಿ ..	1	ಬೂವನಹಳ್ಳಿ ..	ಡಿಟೋ
		49	ಕನ್ನಂಬಾಡಿ ..	1	ಗೋವಿಂದನಹಳ್ಳಿ ..	ಡಿಟೋ
		50	ಮೂವಿನಕೆರೆ ..	1	ಐಲೇನಹಳ್ಳಿ ..	
		51	ಮಲ್ಲಿಗೆರೆ ..	1	ಜಿನಕೆರಿ ..	ಡಿಟೋ
		52	ಹೊಸೂರು ..	1	ಮಲ್ಲೇನಹಳ್ಳಿ ..	ಡಿಟೋ
		53	ಕಾಂಚಹಳ್ಳಿ ..		ಅರಳಕುಪ್ಪೆಯ ವಡದಭಾಗ ..	
		54	ಚಿಕ್ಕಗಡಿಗನಹಳ್ಳಿ ..		ಹೊಸಹಳ್ಳಿಯ ವಂದುಭಾಗ ..	
		55	ಹೊಸಹಳ್ಳಿ ..		....	ನಂ. 54ನೇ ಚಿಕ್ಕಗಡಿಗನಹಳ್ಳಿಯೊಂದಿಗೆ ಹಾಲೀ ಕೇರಿಸಲ್ಪಟ್ಟಿರುವ ಹೊಸಹಳ್ಳಿಯ ಉತ್ತರದಿಕ್ಕಿನ ವಡದ ಭಾಗ ಮಾತ್ರ.

ತಾರೀಖು 1ನೇ ಮಾರ್ಚೀ 1887.

ಕ್ಯಾಂಪ್ ನಂಬರ್ 1603.—ಗುಬ್ಬಿ ಅಮಲ್ದಾರ್ ಹೇಮಾ ಹನುಮಂತಯ್ಯನವರಿಗೆ, 1887ನೇ ಇಸವಿ ಫಿಬ್ರವರೀ 7ನೇ ಮಕ್ಕಂ 234ನೇ ನಂಬರ್ ಇಸ್ತಿಹಾರ್‌ನಾಮೆಯಿಂದ ಕೊಡಲ್ಪಟ್ಟ ರಜಾ, ಇನ್ನೂ 23 ದಿವಸಗಳ ಪರಿಯಂತ ಜಾಸ್ತಿ ಮಾಡಲ್ಪಟ್ಟಿರುತ್ತೆ.

ನಂ. 253.—ಮೆ|| ಎಸ್. ಚೆಲುವಯ್ಯಂಗಾರ್ರು, ಕೋಲಾರದ ಡಿಸ್ಟ್ರಿಕ್ಟ್ಮ್ಯಾಜಿಸ್ಟ್ರೇಟ್ ಚಾರ್ಜನ್ನು 1887ನೇ ಇಸವಿ ಫಿಬ್ರವರೀ 14ನೇ ಮಕ್ಕಳಿನ ಮಧ್ಯಾನ್ನಾತ್ಪರ ಮೆ|| ಬಿ. ಕೃಷ್ಣಯ್ಯಂಗಾರ್ರಿಗೆ ಒಪ್ಪಿಸಿರುತ್ತಾರೆ.

ತಾರೀಖು 22ನೇ ಫಿಬ್ರವರೀ 1887.

ನಂ. 251.—ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡೀ ಕಂಡ ತಖ್ತೀಯಲ್ಲಿ ನಮೂದಿಸಿದ ಪ್ರಕಾರ) ಜೋಡಿದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡೀ ಗ್ರಾಮಗಳು ಇದರಡೀಕಂಡ ತಖ್ತೀಯಲ್ಲಿ ನಮೂದಿರುವ ಸ್ಥಳಗಳಲ್ಲೂ ವ ತಾರೀಖುಗಳಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕಯ್ಕಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಶುರುವಾಗಿ ಉಸಿಕೆಯಾವದೂ ಇಲ್ಲದೆ ಗ್ರಾಮಗಳು ಜಡ ದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗೀ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯೂಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಕೇಕಣಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಆಂಥಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರೆ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ್ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜೂ ಮಾಡಲ್ಪಟ್ಟ ಬರಹಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಬಾಬ್ತಿಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ ಹರಾಜು ಮುಕ್ತಾಯ ಮಾಡಲ್ಪಡತಕ್ಕದ್ದು, ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಕಾಯುಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನು ದಿವಾನರವರು ಕಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯೂಟಿ ಕಮ್ಮಿಷನರವರಿಂದ ರುಜೂ ಮೊಹರ್ ಮಾಡೋಣಾದ ಬಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಸೀಲ್‌ನಲ್ಲಾಗಲಿ ಅಂದಾಜು ಬೀಜವರೀ ವಿಷಯದಲ್ಲಾಗಲೀ ಇರುವ ಗಲ್ಲತಿಗಳಿಗೆ ಸರ್ಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ್ ಪಟ್ಟಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ಬಳಪಟ್ಟಿರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೊಡೀದಾರರ ಹೆಸರು.	ಅಂದಾಜು ಬೀಜವರೀ.	ಅಂದಾಜು ಹುಟ್ಟುವಳೀ ಯಾ ಬೇರೀಜು.	ಸಾಲಿಯಾನಾ ಸರ್ಕಾರಕ್ಕೆ ಕೊಡಬೇಕಾದ ಕ್ವಿಟ್‌ರೆಂಟ್.	ಯಾವಬಾಕೀಗೋ ಸ್ಕರ ಗ್ರಾಮಗಳು ಹರಾಜು ಮಾಡಲ್ಪಡುತ್ತೋ ಅಂಥಾನರ ಕಾರದ ಕಂದಾಯದ ಬಾಕೀ.	ಹರಾಜು ತಾರೀಖು.
					ಎ. ಗುಂ. ಗ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ಬೆಂಗಳೂರು.	ಡಿಟೋ	ಕಿಂಗೇರಿ	ಭೀಮನಕುಪ್ಪೆ.	ಗುರುವಯ್ಯ ವಗೈರೆ	1286 24 0	1164 8 0	90 10 1	286 8 4	1887ನೇ ಇಸವಿ ಮಾರ್ಚಿ ತಾರೀಖು 31ರಲ್ಲು ತಾಲ್ಲೂಕು ಕಚೇರಿಯಲ್ಲಿ ಅ ಮಲ್ದಾರ್ರ ರೂಬರೂ.
ಮೈಸೂರು ಡಿಸ್ಟ್ರಿಕ್ಟಿನ ಫ್ರಂಚ್‌ರಾಕ್ಸ್‌ನ ಡಿ॥	ನಂಜನ್ಗೂ	ಡಿಟೋ	ಕಾಚಗೆರೆ	ಧಾತಿಂಗ್ಲಾಚಾರ್ ಮತ್ತು ಇತರರು	ಖಂ. ಕೂ. ಪ. 4 5 14	362 2 11	160 0 0	175 0 0	ಡಿಟೋ ಏಪ್ರೆಲ್ 1ನೇ ತಾರೀಖಿನಲ್ಲಿ ಡಿಟೋ.
ಕಡೂರು.	ನೊಣಬೆಗೆ	ನೊಣಬೀಡು	ನೊಣಬೀಡು ಅಗ್ರಹಾರ	ಗದ್ದುವಳ್ಳಿ ಕೃಷ್ಣಪ್ಪ	ಎ. ಗುಂ. ಗ. 3610 3 0	535 8 0	535 8 0	57 14 5	ಡಿಟೋ ಮಾರ್ಚೀ 31ರಲ್ಲು ಡಿಟೋ

ತಾರೀಖು 3ನೇ ಮಾರ್ಚೀ 1887.

ನಂ. 254.— ಮೂಲೂರು ತಾಲ್ಲೂಕು ಆಮಲ್ದಾರ್ ಮೀರ್ ನಿಜಾಮುದ್ದೀನ್ ಅಲ್ಲೀಖಾನರಿಗೆ, 1886ನೇ ಇಸವಿ ನವಂಬರ್ 15ನೇ ಮರ್ಕುಂ ಕ್ಯಾಂಪ್ 1139ನೇ ನಂಬರ್ ಈ ಆಫೀಸ್ ಇಸ್ತಿಹಾರ್‌ನಾಮೆಯಿಂದ ಕೊಡಲ್ಪಟ್ಟ ಪ್ರಿವಿಲೀಜ್ ರಜಾ ಪೈಕಿ 14 ದಿನಗಳ ಮಟ್ಟಿಗೆ ಉಪಯೋಗಿಸಿಕ್ಕೊಂಡ ಸಬಬ್ ಉಳಿದ 16 ದಿನಗಳು ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 4ನೇ ಮಾರ್ಚೀ 1887.

ನಂ. 255.—ಮೆ॥ ಸಿ. ರಾಘವಾಚಾರ್ಲು ಯವರು, ಮೈಸೂರು ಡಿಸ್ಟ್ರಿಕ್ಟು ಪೊಲೀಸ್ ಸೂಪರ್‌ಟೆಂಡೆಂಟ್ ಆಫಿಸಿನ ಚಾರ್ಜನ್ನು, ಮಾಹೇ ಗುಜಸ್ತಾ 21ನೇ ಮರ್ಕುಮಿನ ಪೂರ್ವಾನ್ಹದಲ್ಲಿ, ಅಸಿಸ್ಟೆಂಟ್ ಕಮ್ಮಿಷನರ್ ಮೆ॥ ಡಿ. ನಾಮಕಲ್‌ರಾಯರಿಂದ ವಹಿಸಿರುತ್ತಾರೆ.

ಹುಕ್ಕುಂ ಬಮೋಜೀಬ್,
ಆರ್. ವಿಜಯೀಂದ್ರರಾವ್,
ಚೀಫ್ ಸೆಕ್ರಿಟೇರಿ.

ಪಬ್ಲಿಕ್ ವರ್ಕ್ಸ್ ಇಲಾಖೆ.

ಇ ಸ್ತಿ ಹಾ ರ್ ನಾ ಮೆ.

ತಾರೀಖು 25ನೇ ಫಿಬ್ರವರೀ 1887.

ಎಗ್ಜಿಕ್ಯೂಟಿವ್ ಇಂಜಿನಿಯರ್ ಮೆ॥ ಡಬ್ಲ್ಯು. ಮೆಕ್ಕಬ್ಬಿನ್ ಸಾಹೇಬರು, ವ್ಯಾಲೇಸ್ ಡಿವೀಜನಿನ ಚಾರ್ಜನ್ನು, ಮಾಹೇ ಮಜಕೂರು 22ನೇ ಮರ್ಕುಮಿನ ಪೂರ್ವಾನ್ಹದಲ್ಲಿ ವಹಿಸಿರುತ್ತಾರೆ.

ಸಿ. ಬರ್ಡ್, ಲೆಫ್ಟಿನೆಂಟ್ ಕರ್ನಲ್, ಆರ್. ಇ.,
ಮೈಸೂರ್ ಗವರ್ನಮೆಂಟ್ ಪ. ವ. ಇ. ಸೆಕ್ರಿಟೇರಿ.